ISSN: 2454-5813
Impact Factor: RJIF 3.6
Volume 5 Issue 3 2019
Months: Jul - Sep
Printed Journal
Indexed Journal
Refereed Journal
Peer Reviewed Journal

# International Journal of Kannada Research



Tirupati Journals Solutions
New Delhi, India

Year: **2019**, Volume: **5**, Issue: **3**
ISSN: 2454-5813
Impact Factor: **Impact Factor: RJIF 3.6**
Online Available at **www.kannadajournal.com**

# International Journal of Kannada Research

## Index for 2019 (Vol - 5, Issue - 3) Part - B

01. **ದೈವ ಭಕ್ತಿ ಆಚರಣೆ ಮತ್ತು ('ಪಾರ್ಥನೆ') ಹರಕೆ (ಕರ್ನಾಟಕ ಪ್ರದೇಶದ ಹಬ್ಬ, ಜಾತ್ರೆಗಳನ್ನು ಅನುಲಕ್ಷೀಸಿ)**
**Authored by:** ಡಾ.ಸಂಜೀವ ಆರ್.ನಾಯಕ
**oage:** 80-85

02. **ಬಸವಣ್ಣನವರ ವಚನಗಳಲ್ಲಿ ಸಮಾನತೆ**
**Authored by:** ಬಿ. ಬಿ. ಹೊಳಗುಂದಿ, ಡಾ. ಜಿ. ಆರ್. ಅಂಗಡಿ
**Page:** 86-89

03. **ವಚನ ಹಾಗೂ ತತ್ವಪದ ಸಾಹಿತ್ಯದಲ್ಲಿ ಲೋಕ ಕಲ್ಯಾಣ**
**Authored by:** ರಾಮರೆಡ್ಡಿ. ಕೆ.
**Page:** 90-92

04. **'ನಾಯಕ' ಹೆಸರಿಗೆ ಬೇಡರೆ ಸೂಕ್ತ**
**Authored by:** ಮಂಜಪ್ಪ
**Page:** 93-95

05. **ನಾ. ಕಸ್ತೂರಿಯವರ ":ಗಾಳಿಗೋಪುರ" ಕಾದಂಬರಿಯಲ್ಲಿ ಹಾಸ್ಯ**
**Authored by:** ಹೇಮಂತ್ ಕುಮಾರ್ ಎಸ್
**Page:** 96-99

06. **ಬಾಗಲಕೋಟ ಜಿಲ್ಲೆಯ ಜಾನಪದ ವೃತ್ತಿಪರ ಗಾಯಕರು - ಗೊಂದಲಿಗರು**
**Authored by:** ಡಾ. (ಶ್ರೀಮತಿ) ನಂದಾ ಎಮ್. ಪಾಟೀಲ
**Page:** 100-103

07. **ಕನ್ನಡ ಭಾಷೆ ಮತ್ತು ಜನಪದ**
**Authored by:** ಡಾ. ಎಸ್. ಬಿ. ರಾಠೋಡ
**Page:** 104-106

08. **The bahamani kingdom, the political history of two major rulers**
**Authored by:** Rathan N Salian
**Page:** 107-108

09. **ಪುತ್ತೂರಿನ ಐತಿಹಾಸಿಕ ಸ್ಥಳಗಳು**
**Authored by:** ವಿ. ಬಿ. ಅರ್ತಿಕಜೆ
**Page:** 109-111

10. **ಪ್ರಾಥಮಿಕ ಶಾಲಾ ಶಿಕ್ಷಕರ ಪಾತ್ರ ಗ್ರಹಿಕೆಗಳು ವಿಚಾರಗಳು ಹಾಗೂ ತುಲನೆ**
**Authored by:** ಡಾ. ಷಣ್ಮುಖ
**Page:** 112-115




International Journal of Kannada Research
www.kannadajournal.com

ISSN: 2454–5813
IJKR 2019; 5(3): 104-106

© 2019 IJKR
www.kannadajournal.com
Received: 17-05-2019
Accepted: 20-06-2019


**ಡಾ. ಎಸ್. ಬಿ. ರಾಠೋಡ**
ಸಹಾಯಕ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು ಕನ್ನಡ ವಿಭಾಗ.
ಶ್ರೀ ಸಂಗಮೇಶ್ವರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಡಚಣ

**Correspondence**
**ಡಾ. ಎಸ್. ಬಿ. ರಾಠೋಡ**
ಸಹಾಯಕ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು ಕನ್ನಡ ವಿಭಾಗ.
ಶ್ರೀ ಸಂಗಮೇಶ್ವರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಡಚಣ

# ಕನ್ನಡ ಭಾಷೆ ಮತ್ತು ಜನಪದ

**ಡಾ. ಎಸ್. ಬಿ. ರಾಠೋಡ**

## ಪೀಠಿಕೆ

ಇಡೀ ಮಾನವಪ್ರಪಂಚದ ಶೋಧನೆಗಳು, ಮನುಷ್ಯನ ಭಾಷೆಗೆ ಸಮವಾಗಲಾರದು ಎಂಬ ಅಭಿಪ್ರಾಯ ಡಾರ್ವಿನರವರದು. ಮಾನವನಿಗೆ ದೇವರು ನೀಡಿರುವ ಅಪೂರ್ವ ಮತ್ತು ಅಮೂಲ್ಯ ವರಗಳಲ್ಲಿ ಭಾಷೆ ಅತ್ಯಂತ ಪ್ರಮುಖವಾದುದು. ಭಾಷೆ ಇಲ್ಲದೇ ಹೋಗಿದ್ದರೆ, ಮನುಕುಲದ ಬದುಕೇ ಕತ್ತಲಾಗುತ್ತಿತ್ತು. ಭಾಷೆಯಿಂದ ಮಾನವ ಸಂಸ್ಕೃತಿ ಉಳಿಯುತ್ತಿದೆ. ತಲೆಮಾರಿನಿಂದ ತಲೆಮಾರಿನವರೆಗೆ ಜೀವಂತವಾಗಿ ಪ್ರಸಾರವಾಗುತ್ತಿರುವುದು ಭಾಷೆ. ಇದು ಮನುಷ್ಯನ ಅಮೋಘ ಅದ್ಬುತ್ ವರ. ಮಗುವಿನ ತೊದಲು ಮಾತಿನಿಂದ, ಮಹನೀಯರ ಅಮರ ವಾಕ್ಯದವರೆಗೆ ಹಲವಾರು ಮಜಲುಗಳಲ್ಲಿ ಹರಡಿಕೊಂಡಿದೆ. ಅಂದಿನಿಂದ ಇಂದಿನವರೆಗೆ ಮನುಷ್ಯ ಇದರ ಸಹಾಯದಿಂದಲೇ ನಾಗರೀಕನಾಗಿ, ಸಾಹಿತಿಯಾಗಿ, ವೇದಾಂತಿಯಾಗಿ ಸಮಾಜದಲ್ಲಿ ಸರ್ವಶ್ರೇಷ್ಠ ಸದಸ್ಯನ್ನಾಗಿ ಬಾಳ್ವೆಯನ್ನು ಮಾಡುತ್ತಿರುವುದು ವಿಶೇಷ. ಮಾನವನು ಭಾವನಾ ಜೀವಿಯಾಗಿರುವದರಿಂದ ಅವನ ಹೃದಯ ಮನಸ್ಸುಗಳಲ್ಲಿ ಹಲವಾರು ಭಾವ–ತರಂಗಗಳು ಏಳುತಿರುತ್ತವೆ. ಅವು ಕೇವಲ ಭಾವಗಳಾಗಿಯೇ ಸವೆದು, ಸತ್ತು ಹೋದರೆ ಕೆಲವೇ ಕೆಲವು ಜನ ಪ್ರತಿಭಾವಂತರಲ್ಲಿ ಈ ಭಾವನೆಗಳು ಸಾಕಾರರೂಪತಾಳಿ ನಿಲ್ಲುತ್ತವೆ. ಭಾವನೆಯಲ್ಲಿ ಭಾಷೆಯು ಪ್ರಕಟಗೊಂಡರೆ ಸಾಹಿತ್ಯವಾಗುತ್ತದೆ. ಹೀಗಾಗಿ ಸಾಹಿತ್ಯವಾಹಿನಿಗೂ ಭಾಷೆ, ಒಂದು ಅನಿವಾರ್ಯ ಮಾಧ್ಯಮವೆಂದೇ ಹೇಳಲಾಗುತ್ತದೆ.

## ಶಿಷ್ಠಮೊದಲೋ ? ಜನಪದ ಮೊದಲೋ ?

ಯಾವುದೇ ಭಾಷೆಯ ಸಾಹಿತ್ಯ ಕೇವಲ ಬಾಯಿಯಲ್ಲಿಯೇ ಮೊದಮೊದಲು ಉಳಿಯುತ್ತಿತ್ತು. ಜನರು ಆಡುವ ಭಾಷೆಯಲ್ಲಿ ಉಳಿದುಕೊಂಡು ಬೆಳೆದುಕೊಂಡು ಬಂದಿರುವ, ಬರುತ್ತಿರುವ ಸಾಹಿತ್ಯವೇ ಜನಪದ ಸಾಹಿತ್ಯ ಶಿಷ್ಠಸಾಹಿತ್ಯವನ್ನು ಹೋಲಿಕೆ ಮಾಡಿದರೆ, ಜನಪದ ಸಾಹಿತ್ಯ ಮಾನವನ ಸೃಷ್ಟಿ ಎಂದಾಯಿತೋ ಅಂದೇ ಜನಪದ ಸಾಹಿತ್ಯದ ಸೃಷ್ಟಿ ಆಯಿತೆಂದು ಹೇಳಲಾಗುತ್ತದೆ. ಭಾಷೆಯಲ್ಲಿ ಅದರ ಲಿಪಿಗಳ ಆವಿಷ್ಕಾರವಾಯಿತು. ಲಿಪಿಗಳು ಸಂಸ್ಕರಣಗೊಂಡು ಬೆಳೆದು ನಿಂತಾಗ, ಬರವಣಿಗೆ ಆರಂಬವಾಯಿತು ಬರವಣಿಗೆ ಆರಂಭವಾದಂತೆ ಹೀಗೆ ಬರವಣಿಗೆಯಲ್ಲಿ ಭಾವನೆಗಳು ಪ್ರಕಟಗೊಂಡಾಗಲೇ ಶಿಷ್ಟ ಸಾಹಿತ್ಯ ಉಗಮಗೊಂಡಿತು. ಒಂದು ಭಾಷೆ ಸಾಹಿತ್ಯ ಮತ್ತು ನಾಗರಿಕತೆ ನಿಶ್ಚಯವಾಗಿ ಎಂದು ಹುಟ್ಟಿದವು ಎಂಬುವದನ್ನು ಕರಾರುವಕ್ಕಾಗಿ ಹೇಳುವುದು ಅಸಾದ್ಯ. ಮನುಷ್ಯ ಭಾಷೆಯನ್ನು ಕಂಡುಕೊಂಡು ಭಾಷೆಯೊಂದಿಗೆ ಒಡನಾಟ ನಡೆಸುತ್ತಾ ಬರವಣಿಗೆ ಹಾಗೂ ಸಾಹಿತ್ಯವನ್ನು ಸೃಷ್ಟಿಸಿಕೊಂಡಿದ್ದಾನೆ. ಒಂದು ಭಾಷೆ, ಸಂಸ್ಕೃತಿಗಳು ವಿಕಾಸವಾಗುತ್ತಾ ಕಾಲದ ಸಂದರ್ಭಗಳಿಗನುಗುಣವಾಗಿ ಹೊಸ ಆಯಾಮ ಪಡೆಯುತ್ತವೆ. ಒಂದು ಭಾಷೆಯಲ್ಲಿ ಸಾಮಾಜಿಕ ವ್ಯವಹಾರ, ಶಿಕ್ಷಣ, ಸಂಸ್ಕೃತಿ ನಾಗರಿಕತೆಗಳು ಬೆಳೆಯುತ್ತಿರುವಂತೆ ಜೊತೆಯಲ್ಲಿ ಸಾಹಿತ್ಯವು ಸೃಷ್ಟಿಯಾಗುತ್ತದೆ. ಸಾಮಾನ್ಯ ಅರ್ಥದಲ್ಲಿ ಜ್ಞಾನರಾಶಿ ಹಾಗೂ ಜೀವನಾನುಭವಗಳನ್ನೊಳಗೊಂಡ ಗ್ರಂಥರಾಶಿಯನ್ನು ಸಾಹಿತ್ಯ ಎನ್ನಬಹುದು. ಕವಿಗಳು, ದಾರ್ಶನಿಕರು, ವಿಜ್ಞಾನಿಗಳು, ಸಮಾಜ ಚಿಂತಕರು ತಾವು ಕಂಡುಕೊಂಡ ಸತ್ಯಗಳನ್ನು, ತಮ್ಮ ಕನಸು, ಕಲ್ಪನೆ ಮತ್ತು ಆಲೋಚನೆಗಳನ್ನು ಸಂವೇದನಾ ಶೀಲ ಮನಸ್ಥಿತಿಯಲ್ಲಿ ಬರೆದಿಟ್ಟಿರುವ ಜ್ಞಾನ ಸಂಪತ್ತೇ ಸಾಹಿತ್ಯ. ಸಾಹಿತ್ಯವು ಗ್ರಂಥರೂಪಕ್ಕಷ್ಟೇ ಸೀಮಿತವಾಗಿರದೆ ಜನಪದ ಸಂಗೀತ, ಶಿಲ್ಪಕಲೆ, ಸಂಪ್ರದಾಯ ಮುಂತಾಗಿ ವಿಭಿನ್ನ ರೂಪಗಳಲ್ಲಿ ಬೆಳೆಯುತ್ತಿರುವುದು ಗಮನಾರ್ಹ.

ಪ್ರಪಂಚದ ಭಾಷೆ, ಸಂಸ್ಕೃತಿ, ಶಿಕ್ಷಣ ಬೆಳೆದು ವಿಕಾಸವಾದಂತೆ ಸಾಹಿತ್ಯವು ಹುಟ್ಟಿಬೆಳೆದಿರಬೇಕು. ಸಾಹಿತ್ಯವು ವಿವಿಧ ಕ್ಷೇತ್ರದಲ್ಲಿ ಕೃಷಿವಾದಂತೆ ಹೆಚ್ಚ ಹೆಚ್ಚೂ ಕವಿ, ಸಾಹಿತಿಗಳು, ಸಹೃದಯರು, ವಿಮರ್ಶಕರು, ಸಾಹಿತ್ಯ ಪೋಷಕರು ಹುಟ್ಟಿ ಕೊಂಡಿರುವುದು ನಿಜ. ಒಟ್ಟಾರೆ ನಮ್ಮ ಜನಜೀವನ ವಿಕಾಸವಾದಂತೆ ಜನಪದ ಮೌಖಿಕ ಸಾಹಿತ್ಯವನ್ನು ಹಿಂದಕ್ಕೆ ಹಾಕಿ ಲಿಖಿತ ರೂಪದಲ್ಲಿ ಶಿಷ್ಟಸಾಹಿತ್ಯ ರಚಿತಗೊಂಡಿರುವುದು ಖಚಿತ. ಎಲ್ಲ ಸಾಹಿತ್ಯಕ್ಕೆ ಜನಪದವೇ ಮೂಲಬೇರು ಎಂದು ಹೇಳುವದರಲ್ಲಿ ಯಾವ ತಪ್ಪು ಕಾಣಲಾರೆವು. ಯಾಕೆಂದರೆ ಮನುಷ್ಯನ ಹುಟ್ಟಿನೊಂದಿಗೆ ಈ ಜನಪದ ಸಾಹಿತ್ಯ ಹುಟ್ಟಿಕೊಂಡಿರಬೇಕು ಜನಪದ ಅಂದರೆ ಜನರು ತಮ್ಮ ವಿನೋದದ ಗೋಸ್ಕರ ಹಾಡಿನ ರೂಪದಲ್ಲಿ ಹೊರಹಾಕಿರಬೇಕು.